3

!!Jai sri gurudev!!

# SRI ADICHUNCHANAGIRI FIRST GRADE COLLEGE

## CHANNRAYAPATTANA-573116

## Independence Day

**Date: 16-08-2020**

**A brief Report**

On **15th august 2020** we had celebrated "**74th Independence Day**" in the college and it is started with flag hasting by Dr N Shankaresh principal, SAFGC C R Patna and also some cultural programs done by students and principal sir talked adout independence day with remembering freedom fighters and this programme chief guests Dr H P Shankar principal, S A B Ed . Shri Malaligowda S A PU college, Shri Devaraju Head master, Kumar C C Principal BGS Public School. and smt. Arpitha H J preedosed the vote of thanks .

Principal
Sri Adichunchanagiri First Grade Collage
Channarayapatna-573 116

॥ಜೈ ಶ್ರೀ ಗುರುದೇವ್ ॥

ಪ್ರಾತಃ ಸ್ಮರಣೀಯ ಯುಗಯೋಗಿ ಪರಮಪೂಜ್ಯ ಜಗದ್ಗುರು ಪದ್ಮಭೂಷಣ

ಶ್ರೀ ಶ್ರೀ ಶ್ರೀ ಡಾ.ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ದಿವ್ಯ ಸ್ಮರಣೆಯೊಂದಿಗೆ ಹಾಗೂ ಪೂರ್ಣಾನುಗ್ರಹದೊಂದಿಗೆ

ದಿವಂಗತ ಸನ್ಮಾನ್ಯ ಹೆಚ್.ಸಿ.ಶ್ರೀಕಂಠಯ್ಯ ನವರ ಸ್ಮರಣೆಯೊಂದಿಗೆ

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ದಿವ್ಯ ಕೃಪಾಶೀರ್ವಾದಗಳೊಂದಿಗೆ

ಪೂಜ್ಯ ಶ್ರೀ ಶ್ರೀ ಶಂಭುನಾಥ ಮಹಾಸ್ವಾಮೀಜಿಯವರು,

ಕಾರ್ಯದರ್ಶಿಗಳು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಹಾಸನ ಇವರ ಶುಭಹಾರೈಕೆಗಳೊಂದಿಗೆ



## 74ನೇ ಸ್ವಾತಂತ್ರ್ಯ ದಿನಾಚರಣೆ



# ಧ್ವಜಾರೋಹಣ

ಬೆಳಿಗ್ಗೆ :7.45 ಗಂಟೆಗೆ
ದಿನಾಂಕ: 15–08–2020

ರಾಷ್ಟ್ರಕವಿ ಕುವೆಂಪು ವೇದಿಕೆ
ಎಸ್ಎಎಫ್ಜಿ ಕಾಲೇಜು ಚನ್ನರಾಯಪಟ್ಟಣ

**ಧ್ವಜಾರೋಹಣ** : **ಡಾ.ಎನ್.ಶಂಕರೇಶ್, ಪ್ರಾಂಶುಪಾಲರು ಎಸ್.ಎ.ಎಫ್.ಜಿ.ಕಾಲೇಜು ಹಾಗೂ ವೇದಿಕೆಯ ಅತಿಥಿ ಗಣ್ಯರಿಂದ**

**ಮುಖ್ಯ ಅತಿಥಿಗಳು** :
1) ಡಾ. ಹೆಚ್.ಪಿ.ಶಂಕರ್ ಪ್ರಾಂಶುಪಾಲರು, ಶ್ರೀ ಆದಿಚುಂಚನಗಿರಿ ಶಿಕ್ಷಣ ಮಹಾವಿದ್ಯಾಲಯ
2) ಶ್ರೀ ಮಳಲಿಗೌಡ, ಪ್ರಾಂಶುಪಾಲರು, ಶ್ರೀ ಆದಿಚುಂಚನಗಿರಿ ಪ.ಪೂ.ಕಾಲೇಜು
3) ಶ್ರೀ ಸಿ.ಬಿ.ಶಂಕರೇಗೌಡ, ಪ್ರಾಂಶುಪಾಲರು, ಶ್ರೀ ಆದಿಚುಂಚನಗಿರಿ ಐ.ಟಿ.ಐ
4) ಶ್ರೀ ದೇವರಾಜು, ಮುಖ್ಯೋಪಾಧ್ಯಾಯರು, ಶ್ರೀ ಆದಿಚುಂಚನಗಿರಿ ಪ್ರೌಢಶಾಲೆ
5) ಶ್ರೀ ಕುಮಾರ್ ಸಿ.ಸಿ. ಪ್ರಾಂಶುಪಾಲರು, ಬಿ.ಜಿ.ಎಸ್ ಪಬ್ಲಿಕ್ ಸ್ಕೂಲ್ ಮತ್ತು ಪದವಿ ಪೂರ್ವ ಕಾಲೇಜು
6) ಶ್ರೀಮತಿ ನಾಸಿರಾಬಾನು, ಪ್ರಾಂಶುಪಾಲರು, ನಾಗಶ್ರೀ ವಿದ್ಯಾಸಂಸ್ಥೆ.



Principal
Sri Adichunchanagiri First Grade Collage
Channarayapatna-573 116

ನಿರೂಪಕ: ಡಾ.ಹೆಚ್.ಎಸ್.ರವೀಂದ್ರ

||ಜೈ ಶ್ರೀ ಗುರುದೇವ್||

# ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು
## ಚನ್ನರಾಯಪಟ್ಟಣ-573116 ಹಾಸನ ಜಿಲ್ಲೆ

ದಿನಾಂಕ:12-08-2020

ಮಾನ್ಯರೆ,

ವಿಷಯ: 74ನೇ ಸ್ವಾತಂತ್ರ್ಯೋತ್ಸವ ಸಮಾರಂಭದ ಬಗ್ಗೆ.

***********

2020-21ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯು ದಿನಾಂಕ:15-08-2020ರ ಶನಿವಾರ ಬೆಳಗ್ಗೆ 7.45ಕ್ಕೆ ಕಾಲೇಜಿನ ಕುವೆಂಪು ವೇದಿಕೆಯಲ್ಲಿ ಆಯೋಜಿಸಲಾಗಿದೆ. ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಸರಳವಾಗಿ ಮತ್ತು ಸೂಕ್ತ ಮುಂಜಾಗ್ರತೆಯೊಡನೆ ಸಮಾರಂಭವನ್ನು ಆಯೋಜಿಸಲು ಸರ್ಕಾರದ ಸೂಚನೆಯಿರುತ್ತದೆ. ಆದ್ದರಿಂದ ಸಭಾ ಕಾರ್ಯಕ್ರಮ ಮತ್ತು ಮನರಂಜನಾ ಕಾರ್ಯಕ್ರಮಗಳು ಈ ಬಾರಿ ಇರುವುದಿಲ್ಲ ತಾವು, ಮುಖ್ಯ ಅತಿಥಿಗಳಾಗಿ ಭಾಗವಹಿಸಬೇಕಾಗಿ ಕೋರುತ್ತಾ ತಮ್ಮ ಸಿಬ್ಬಂದಿ ವರ್ಗದವರು ಭಾಗವಹಿಸಲು ಸೂಚಿಸಿ, ರಾಷ್ಟ್ರೀಯಾ ಹಬ್ಬದ ಯಶಸ್ಸಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

ಮುಂಗಡವಾಗಿ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

Principal
Sri Adichunchanagiri First Grade Collage
Channarayapatna-573 116

5

!!Jai sri gurudev!!

# SRI ADICHUNCHANAGIRI FIRST GRADE COLLEGE

## CHANNRAYAPATTANA-573116

## "Kannada Rajyothsava Celebration"

**Date: 02/11/2020**

**A brief Report**

Department of kannada organized by "**Kannada Rajyotsava Celebration"** on **01st November 2020** the progaramme on convened Harshitha A M II BA student foollwd with welcome speech by Dr N Shankaresh principal our college Introductory speech . welcome speech Nagraja N T Asst.. Professor Dept..of political Science vote of thanks by Rajeesh H S Asst. Professor Dept Of History and anchoring by Niroosha M R Asst.Professor Dept..of.kannada.

Principal
Sri Adichunchanagiri First Grade Collage
Channarayapatna-573 116

# ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು,

## ಚನ್ನರಾಯಪಟ್ಟಣ

---

## ಸೂಚನೆ

ದಿನಾಂಕ: 28/10/2020

ಈ ಮೂಲಕ ತಿಳಿಸುವುದೇನೆಂದರೆ ಕನ್ನಡ ವಿಭಾಗ ಹಾಗೂ ಎಲ್ಲಾ ವಿಭಾಗದ ವತಿಯಿಂದ **ದಿನಾಂಕ 01/11/2020ರ ಭಾನುವಾರ ಬೆಳಿಗ್ಗೆ 8:00 ಘಂಟೆಗೆ ಕನ್ನಡ ರಾಜ್ಯೋತ್ಸವ ದಿನಾಚರಣೆಯನ್ನು** ಆಚರಿಸುತ್ತಿರುವುದರಿಂದ ಎಲ್ಲಾ ವಿಭಾಗದ ಮುಖ್ಯಸ್ಥರು, ಅಧ್ಯಾಪಕರು ಹಾಗೂ ಅಧ್ಯಾಪಕೇತರ ವರ್ಗದವರು ಸರಿಯಾದ ಸಮಯಕ್ಕೆ ಕಡ್ಡಾಯವಾಗಿ ಹಾಜರಾಗಬೇಕೆಂದು ಈ ಮೂಲಕ ಸೂಚಿಸಲಾಗಿದೆ.

Principal
ಪ್ರಾಂಶುಪಾಲರು
Sri Adichunchanagiri First Grade Collage
Channarayapatna-573 116

# ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿ

**ದಿನಾಂಕ:** 01–11–2020 **ಸಮಯ:** ಬೆಳಗ್ಗೆ 8.00ಗಂಟೆ

**ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ**

***ಕಾರ್ಯಕ್ರಮದ ಆಯೋಜನೆ:*** *ಕನ್ನಡ ವಿಭಾಗ*

**ವೇದಿಕೆ: ಕುವೆಂಪು ವೇದಿಕೆ**

**ಸಂಕ್ಷಿಪ್ತ ವರದಿ**

ದಿನಾಂಕ 01–11–2021ರಂದು ಕಾಲೇಜು ಹಾಗೂ ಕನ್ನಡ ವಿಭಾಗದ ವತಿಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎನ್. ಶಂಕರೇಶ್ ಪ್ರಾಂಶುಪಾಲರು ವಹಿಸಿದ್ದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಎನ್.ಟಿ. ನಾಗರಾಜ ರವರು ಸ್ವಾಗತಿಸಿದರು. ಕನ್ನಡ ಉಪನ್ಯಾಸಕರಾದ ನಿರೂಷ ಎಂ.ಆರ್. ಅವರು ಕಾರ್ಯಕ್ರಮ ನಿರೂಪಣೆ ಮಾಡಿ ಕನ್ನಡ ನಾಡು ನುಡಿಯ ಬಗ್ಗೆ ಮಾತನಾಡಿದರು. ಇತಿಹಾಸ ವಿಭಾಗದ ಉಪನ್ಯಾಸಕರಾದ ರಾಜೇಶ್ ಹೆಚ್.ಎಸ್ ಇವರು ವಂದಿಸಿದರು. ಕಾಲೇಜಿನ ನೌಕರ ವರ್ಗದವರಿಂದ ತಾಯಿ ಕನ್ನಡಾಂಬೆಗೆ ಪುಷ್ಪಾರ್ಚನೆ ಹಾಗೂ ದೀಪ ಬೆಳಗುವ ಮೂಲಕ ಕಾರ್ಯಕ್ರಮ ಅಚ್ಚುಕಟ್ಟಾಗಿ ನೆರವೇರಿತು.

Principal
Sri Adichunchanagiri First Grade Collage
Channarayapatna-573 116





Principal
Sri Adichunchanagiri First Grade Collage
Channarayapatna-573 116





Principal
Sri Adichunchanagiri First Grade Collage
Channarayapatna-573 116

6

!!Jai sri gurudev!!

# SRI ADICHUNCHANAGIRI FIRST GRADE COLLEGE

## CHANNRAYAPATTANA-573116

## "National integration day celebration"

**Date: 24/11/2020**

**A brief Report**

Department of Political Science and economics organized by **"National Integration Day Celebration"** on **19th November 2020** the progaramme on convened smt shobhavathi B foollwd with welcome speech by Dr N Shankaresh principal our college Introductory speech . preached the oath of allegiance Sri K B Manjunatha Physical Director . our college all teachers and Non-faculty members were present.

Principal
Sri Adichunchanagiri First Grade Collage
Channarayapatna-573 116

SRI ADICHUNCHANAGIRI FIRST GRADE COLLEGE, CHANNARAYAPATNA

ಚನ್ನರಾಯಪಟ್ಟಣದ ಶ್ರೀ ಆದಿಚುಂಚನಗಿರಿ ಕಾಲೇಜಿನಲ್ಲಿ ರಾಷ್ಟ್ರೀಯ ಏಕ್ಯತಾ ಸಪ್ತಾಹ ಆಚರಣೆ.

ಮಾತೃಭಾಷೆಯನ್ನು ಪ್ರೀತಿಸುವ ಜೊತೆಗೆ ಅನ್ಯ ನಾಡಿನ ಭಾಷಿಗರನ್ನು ಗೌರವಿಸುವ ಗುಣವನ್ನು ಎಲ್ಲರೂ ಬೆಳೆಸಿಕೊಳ್ಳಬೇಕೆಂದು ಡಾ. H.P. ಶಂಕರ್ ಅಭಿಪ್ರಾಯಪಟ್ಟರು, ಚನ್ನರಾಯಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ 'ರಾಷ್ಟ್ರೀಯ ಏಕ್ಯತಾ ಸಪ್ತಾಹ' ಆಚರಣೆ-2020 ರ ಪ್ರತಿಜ್ಞಾ ವಿಧಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. N. ಶಂಕರ್ ಮಾತನಾಡಿ ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ಕರ್ನಾಟಕ ರಾಷ್ಟ್ರೀಯ-ಏಕ್ಯತೆಯ ದೊಡ್ಡ ಮಾದರಿ ರಾಜ್ಯವಾಗಿದೆ ಎಂದು ನುಡಿದರು. ಅಧ್ಯಾಪಕ ಮತ್ತು ಅಧ್ಯಾಪಕೇತರ ವರ್ಗದವರು ಉಪಸ್ಥಿತರಿದ್ದರು.

ಏಕ್ಯತಾ ಪ್ರಮಾಣ ವಚನವನ್ನು ದೈಹಿಕ ಶಿಕ್ಷಣ ನಿರ್ದೇಶಕ K.B. ಮಂಜುನಾಥ ಬೋಧಿಸಿದರು.

H.S. Ravindra
24/11/2020

ಕಾರ್ಯದರ್ಶಿ
ಕಲಾ ಸಿಂಚನ ಸಾಂಸ್ಕೃತಿಕ ಸಮಿತಿ
ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು
ಚನ್ನರಾಯಪಟ್ಟಣ-573116

Principal
Sri Adichunchanagiri First Grade Collage
Channarayapatna-573 116

# ಜಾಗೃತಿ ಸಪ್ತಾಹ: ಪ್ರತಿಜ್ಞೆ ಸ್ವೀಕಾರ



ಚನ್ನರಾಯಪಟ್ಟಣ: 'ಭ್ರಷ್ಟಾಚಾರ ನಿರ್ಮೂಲನೆಯಾದರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ' ಎಂದು ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜು ಪ್ರಾಂಶುಪಾಲ ಎನ್. ಶಂಕರೇಶ್ ಹೇಳಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ವಿಭಾಗ, ಐಕ್ಯೂಎಸಿ ಸಹಯೋಗದಲ್ಲಿ ಗುರುವಾರ ಭ್ರಷ್ಟಾಚಾರದ ವಿರುದ್ಧ ಜಾಗೃತಿ ಮೂಡಿಸಲು ಏರ್ಪಡಿಸಿದ್ದ ಜಾಗೃತಿ ಅರಿವು ಸಪ್ತಾಹದಲ್ಲಿ ಅವರು ಮಾತನಾಡಿದರು.

'ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಕುರಿತು ಜಾಗೃತಿ ಮೂಡಿಸಬೇಕಿದೆ. ಭ್ರಷ್ಟಾಚಾರ ನಿವಾರಣೆಗೆ ಎಲ್ಲರೂ ಕಟಿಬದ್ಧರಾಗಬೇಕು' ಎಂದು ಹೇಳಿದರು.

ಕಾಲೇಜು ಸಿಬ್ಬಂದಿ ವರ್ಗ ಪ್ರತಿಜ್ಞೆ ಸ್ವೀಕರಿಸಿದರು.

ಸಹಪ್ರಾಧ್ಯಾಪಕರಾದ ಎಚ್.ಎಸ್. ರವೀಂದ್ರ, ಎಚ್. ಹೊಂಬಾಳಮ್ಮ, ಎನ್.ಟಿ. ನಾಗರಾಜು, ಸಿದ್ದರಾಜು ಇತರರು ಇದ್ದರು.

Principal
Sri Adichunchanagiri First Grade Collage
Channarayapatna-573 116

ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ದೂರವಾಣಿ: 080-22343904/05.

ಕಾಲೇಜು ಶಿಕ್ಷಣ ಆಯುಕ್ತರ ಕಚೇರಿ,
ಬೆಂಗಳೂರು-56000
ದಿನಾಂಕ: 17.11.202

ಸಂಖ್ಯೆ: ಕಾಶಿಇ ಶೈ.ವಿ/06/ಸುತ್ತೋಲೆ/2020-21

Sri Adi Chunchanagiri First Grade College
573 116.
No.____
Dt.____

### ಸುತ್ತೋಲೆ

ವಿಷಯ: ದಿನಾಂಕ:19.11.2020 ರಿಂದ 25.11.2020 ರವರೆಗೆ ರಾಜ್ಯಾದ್ಯಂತ "ರಾಷ್ಟ್ರೀಯ ಏಕತಾ ಸಪ್ತಾಹ" ವನ್ನು ಆಚರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 125 ರಾಐಸ 2020, ದಿನಾಂಕ:04.11.2020.

* * * * * *

ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಏಕತೆಯನ್ನು ಬಲಪಡಿಸಲು, ದೇಶದಲ್ಲಿ ಹೆಚ್ಚುತ್ತಿರುವ ಹಿಂಸಾಚಾರ ಮತ್ತು ಕೋಮು ದ್ವೇಷವನ್ನು ತಡೆಗಟ್ಟುವುದಕ್ಕಾಗಿ ದಿನಾಂಕ: 19.11.2020 ರಿಂದ 25.11.2020 ರವರೆಗೆ "ರಾಷ್ಟ್ರೀಯ ಏಕತಾ ಸಪ್ತಾಹ" ವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂದು ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಈ ಸಂಬಂಧ, ಈ ಸಪ್ತಾಹದ ಅಂಗವಾಗಿ ಹಮ್ಮಿಕೊಳ್ಳಬೇಕಾಗಿರುವ ಕಾರ್ಯಕ್ರಮದ ವಿವರಗಳು ಹಾಗೂ ಪ್ರಮಾಣ ವಚನದ ಪ್ರತಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದ್ದು, ರಾಜ್ಯದ ಎಲ್ಲಾ ಸರ್ಕಾರಿ/ ಖಾಸಗಿ ಅನುದಾನಿತ/ ಖಾಸಗಿ ಅನುದಾನ ರಹಿತ ಕಾಲೇಜುಗಳಲ್ಲಿ ದಿನಾಂಕ:19.11.2020 ರಿಂದ 25.11.2020 ರವರೆಗೆ "ರಾಷ್ಟ್ರೀಯ ಏಕತಾ ಸಪ್ತಾಹ" ವನ್ನು ಅರ್ಥಪೂರ್ಣವಾಗಿ ಆಚರಿಸುವುದರೊಂದಿಗೆ ಪ್ರತಿಜ್ಞೆಯನ್ನು ಸ್ವೀಕರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಗಿದೆ. ಹಾಗೂ ಕಾರ್ಯಕ್ರಮಗಳನ್ನು ನಡೆಸುವಾಗ, ರಾಷ್ಟ್ರೀಯ ಭಾವೈಕ್ಯತಾ ಚಿಹ್ನೆಯನ್ನು ವೇದಿಕೆಯ ಮೇಲೆ ಪ್ರಮುಖವಾಗಿ ಪ್ರದರ್ಶನ ಮಾಡುವಂತೆ ಕ್ರಮ ತೆಗೆದುಕೊಳ್ಳಬೇಕು.

ದಿನಾಂಕ:19.11.2020ರ ಗುರುವಾರದಂದು, ರಾಷ್ಟ್ರೀಯ ಏಕತಾ ಪ್ರಮಾಣ ವಚನವನ್ನು ಇಲಾಖೆಯ ಎಲ್ಲಾ ಕಾಲೇಜು / ಕಛೇರಿಗಳಲ್ಲಿ ಸ್ವೀಕರಿಸಬೇಕಾಗಿ ತಿಳಿಸಲಾಗಿದೆ.

**ಕೋವಿಡ್-19 ರ ಮಾರ್ಗಸೂಚಿಗಳನ್ನು ಅನುಸರಿಸಿ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಕಾರ್ಯಕ್ರಮವನ್ನು ಆಯೋಜಿಸುವಂತೆ ಸೂಚಿಸಲಾಗಿದೆ.**

To,
Dr. H.S.R.

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

ಇವರಿಗೆ: - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ

1) ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗಾ.
3) ಆಯುಕ್ತರು, ನಿರ್ದೇಶಕರು, ಮುಖ್ಯ ಆಡಳಿತಾಧಿಕಾರಿಗಳು, ಹೆಚ್ಚುವರಿ ನಿರ್ದೇಶಕರು, ಜಂಟಿ ನಿರ್ದೇಶಕರ ಆಪ್ತಶಾಖೆ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
4) ಸಮಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
5) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ.

19/11/2020

ಪ್ರತಿ:

1) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ರಾಐಸೇಯು), ಕೊ.ಸಂ.360, 3ನೇ ಮಹಡಿ, ವಿಧಾನಸೌಧ, ಬೆಂಗಳೂರು-560001.
2) ಕಛೇರಿ ಪ್ರತಿ.

# ರಾಷ್ಟ್ರೀಯ ಐಕ್ಯತಾ ಪ್ರಮಾಣ ವಚನ

"ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಐಕ್ಯತೆಯನ್ನು ಸಂರಕ್ಷಿಸಲು ಮತ್ತು ಬಲಪಡಿಸಲು ಅರ್ಪಣಾ ಮನೋಭಾವದಿಂದ ಕೆಲಸ ಮಾಡುತ್ತೇನೆಂದು ನಾನು ಶ್ರದ್ಧಾಪೂರ್ವಕವಾಗಿ ಪ್ರಮಾಣ ಮಾಡುತ್ತೇನೆ."

"ಅಲ್ಲದೆ ನಾನು ಎಂದಿಗೂ ಹಿಂಸಾಚಾರದಲ್ಲಿ ತೊಡಗುವುದಿಲ್ಲವೆಂದು ಮತ್ತು ಮತ, ಭಾಷೆ, ಪ್ರದೇಶ ಅಥವಾ ಇತರ ರಾಜಕೀಯ ಅಥವಾ ಆರ್ಥಿಕ ಕುಂದು ಕೊರತೆಗಳ ಬಗೆಗಿನ ಭಿನ್ನಾಭಿಪ್ರಾಯಗಳನ್ನು ಮತ್ತು ವಿವಾದಗಳನ್ನು ಶಾಂತಿಯುತವಾಗಿ ಹಾಗೂ ಸಂವಿಧಾನಾತ್ಮಕ ರೀತಿಯಲ್ಲಿ ಬಗೆಹರಿಸಿಕೊಳ್ಳುವ ದಿಸೆಯಲ್ಲಿ ನನ್ನ ಪ್ರಯತ್ನವನ್ನು ಮುಂದುವರೆಸುತ್ತೇನೆಂದೂ ಪ್ರಮಾಣ ಮಾಡುತ್ತೇನೆ."

Principal
Sri Adichunchanagiri First Grade Collage
Channarayapatna-573 116

IMG20201119153853.jpg

## ದಿನಾಂಕ 19.11.2020 ರಿಂದ 25.11.2020 ರವರೆಗೆ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ವಿವರ

**ದಿನಾಂಕ 19.11.2020 ಗುರುವಾರ** — "ರಾಷ್ಟ್ರೀಯ ಏಕತಾ ದಿನ"

ಅಹಿಂಸೆ, ಕೋಮು ಸೌಹಾರ್ದತೆ, ಜಾತ್ಯತೀತತೆ, ಈ ವಿಷಯಗಳ ಬಗ್ಗೆ ಸಭೆಗಳನ್ನು ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು.

**ದಿನಾಂಕ 20.11.2020 ಶುಕ್ರವಾರ** — "ಅಲ್ಪ ಸಂಖ್ಯಾತರ ಕಲ್ಯಾಣ ದಿನ"

ಅಲ್ಪ ಸಂಖ್ಯಾತರ ಅಭಿವೃದ್ಧಿಗಾಗಿ ರೂಪಿಸಿರುವ 15 ಅಂಶಗಳ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪ್ರಯತ್ನಿಸುವುದು ಮತ್ತು ಕೋಮು ಗಲಭೆ ಪೀಡಿತ ಪ್ರದೇಶಗಳಲ್ಲಿ ಭಾತೃತ್ವ ಭಾವನೆ ಬೆಳೆಸುವಂತೆ ಮೆರವಣಿಗೆಗಳನ್ನು ಏರ್ಪಡಿಸುವುದು.

**ದಿನಾಂಕ 21.11.2020 ಶನಿವಾರ** — "ಭಾಷಾ ಸೌಹಾರ್ದತಾ ದಿನ"

ಭಾರತದ ಇತರ ಪ್ರದೇಶಗಳ ಭಾಷಾ ಪರಂಪರೆಯನ್ನು ಮತ್ತೊಂದು ಪ್ರದೇಶದ ಜನತೆಗೆ ತಿಳಿ ಹೇಳುವ ಸಲುವಾಗಿ ವಿಶೇಷ ಸಾಹಿತ್ಯಕ ಸಮಾರಂಭ ಮತ್ತು ಕವಿ ಸಮ್ಮೇಳನಗಳನ್ನು ಏರ್ಪಡಿಸುವುದು.

**ದಿನಾಂಕ 22.11.2020 ಭಾನುವಾರ** — "ದುರ್ಬಲ ವರ್ಗಗಳ ದಿನ"

ಭೂಹೀನ ಕೃಷಿ ಕಾರ್ಮಿಕರಿಗೆ ಹೆಚ್ಚುವರಿ ಜಮೀನು ಮಂಜೂರಾತಿ ಕಾರ್ಯಕ್ರಮ ಸೇರಿದಂತೆ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ ಮತ್ತು ದುರ್ಬಲ ವರ್ಗಗಳ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳನ್ನು ಎತ್ತಿ ತೋರಿಸುವಂತೆ ಸಭೆ ಮತ್ತು ಮೆರವಣಿಗೆಗಳನ್ನು ಏರ್ಪಡಿಸುವುದು.

**ದಿನಾಂಕ 23.11.2020 ಸೋಮವಾರ** — "ಸಾಂಸ್ಕೃತಿಕ ಏಕತಾ ದಿನ"

ಭಾರತೀಯ ಪರಂಪರೆಯಾದ ವಿವಿಧತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸುವಂತಹ ಸಂಸ್ಕೃತಿ ಮತ್ತು ಐಕ್ಯತೆಯನ್ನು ಸಂರಕ್ಷಿಸುವಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

**ದಿನಾಂಕ 24.11.2020 ಮಂಗಳವಾರ** — "ಮಹಿಳಾ ದಿನ"

ಭಾರತೀಯ ಸಮಾಜದಲ್ಲಿ ಮಹಿಳೆಯರ ಪ್ರಾಮುಖ್ಯತೆ ರಾಷ್ಟ್ರ ನಿರ್ಮಾಣ ಹಾಗೂ ಪ್ರಗತಿಯಲ್ಲಿ ಅವರ ಪಾತ್ರವನ್ನು ಎತ್ತಿ ತೋರಿಸುವಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

**ದಿನಾಂಕ 25.11.2020 ಬುಧವಾರ** — "ಪರಿಸರ ರಕ್ಷಣಾ ದಿನ"

ಜನ ಸಾಮಾನ್ಯರಿಗೆ ಪರಿಸರದ ಬಗ್ಗೆ ಹಾಗೂ ಅದನ್ನು ಉಳಿಸಿ ಬೆಳೆಸಲು ತಿಳುವಳಿಕೆ ಹೇಳುವ ಸಭೆ ಸಮಾರಂಭಗಳನ್ನು ಏರ್ಪಡಿಸುವುದು.

Principal
Sri Adichunchanagiri First Grade Collage
Channarayapatna-573 116